ಏನು ಮಾಡಬೇಕೋ ಅದನ್ನು ಅತೀ ಶೀಘ್ರದಲ್ಲಿ ಮಾಡುವುದಕ್ಕೆ ಪ್ರಯತ್ನಿಸುತ್ತೇನೆ. ಎರಡನೆಯದಾಗಿ, ತಾವು ಏನು ಪ್ರಶ್ನೆ ಕೇಳಿದಿರಿ, ಅದಕ್ಕೆ ನಮ್ಮ ಹಣದ ಲಭ್ಯತೆಯನ್ನು ನೋಡಿ ಕೆಲಸ ಮಾಡಲಿಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ ಬಂಗೇರ : ನಾನು ತಮ್ಮಲ್ಲಿ ವಿನಂತಿ ಮಾಡುವುದು ಇಷ್ಟೇ, ಈ ವರ್ಷವೇ ಈ ರಸ್ತೆಗಳು ಆಗದೇ ಇದ್ದಾಗ ಖಂಡಿತವಾಗಲೂ ರಸ್ತೆಗಳಲ್ಲಿ ಮೋಟಾರಗಳಾಗಲಿ ಸಂಚಾರ ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಜೊತೆಯಲ್ಲಿ ಈಗಾಗಲೇ ತಮಗೆ ಗೊತ್ತಿರುವ ಹಾಗೆ ಚಿಕ್ಕಮಗಳೂರು ಕಡೆಯಿಂದ ಬರುವಂಥ ವಾಹನಗಳು, ಇವರ ಪ್ರಕಾರ ಧಾರಣ ಶಕ್ತಿ 20 ಟನ್ ಕೆಪ್ಯಾಸಿಟಿ ಇದ್ದರೂ ಈಗಾಗಲೇ ಆ ರಸ್ತೆಗಳಲ್ಲಿ 40 ರಿಂದ 50 ಟನ್ ತುಂಬಿಸಿಕೊಂಡು ಲಾರಿಗಳು ಬರುತ್ತಿವೆ. ಅದನ್ನು ನಿಲ್ಲಿಸುವಂಥ ಕಾರ್ಯಗಳು ಕೂಡ ಮಾಡದೇ ಇರುವುದರಿಂದ ರಸ್ತೆಗಳು ಇನ್ನೂ ಕೂಡ ನಾದುರಸ್ಥಿತಿ ಹೋಗುತ್ತದೆ. ಇದರ ಬಗ್ಗೆ ತಮ್ಮ ಮೂಲಕ ನಾನು ಕೇಳುತ್ತಿದ್ದೇನೆ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ ಎಂಬುದನ್ನು ನನಗೆ ತಿಳಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಪರಿಶೀಲಿಸಿ ಅತಿ ಶೀಘ್ರದಲ್ಲಿ ವಾಹನಕ್ಕೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನಾವು ಕೆಲಸ ಮಾಡಿಸುವುದಕ್ಕೆ ಪ್ರಯತ್ನಿಸುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಪ್ರಕಾಶ್ ಖಂಡ್ರೆಯವರು ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಈಗ ರಸ್ತೆ ಗುಂಡಿಗಳು ರಸ್ತೆಯ ಹಿಂಗು ಗುಂಡಿಗಳಾಗಿವೆ.

ಅಧ್ಯಕ್ಷರು : ಮಾನ್ಯ ಸದಸ್ಯರ ಸಲಹೆಯ ಮೇಲೆ ಅವರು ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ ಆದ್ದರಿಂದ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಅರಗ ಜ್ಞಾನೇಂದ್ರ : ಸ್ಟೇಟ್ ಹೈವೇ ಬಗ್ಗೆ ಏನು ಮಾಡಿದ್ದಾರೆಂಬುದನ್ನು ಹೇಳಬೇಕಾಗುತ್ತದೆ. ಶಾರ್ಟ್ ಟರ್ಮ್ ಟೆಂಡರ್ ಕರೆದಿದ್ದರು, ಸ್ಟೇಟ್ ಹೈವೇಯದ್ದು ಏನೂ ಮಾಡುತ್ತಿಲ್ಲ. ರಾಜ್ಯ ಹೆದ್ದಾರಿ ಮೊನ್ನೆ ಮುಗಿದು ಹೋಗಿದೆ. ರಾಜ್ಯ ಹೆದ್ದಾರಿದ್ದು ಸ್ಟಾರ್ ಇದು ನಿಮ್ಮ ಕ್ಷೇತ್ರಕ್ಕೂ ಬರುತ್ತದೆ. ಅವು ಅನಾಥವಾಗಿವೆ. ನಾವು ಅಧಿವೇಶನ ಮುಗಿಸಿ ಊರಿಗೆ ಹೋಗುವ ಹಾಗೆ ಇಲ್ಲ. ರಾಜ್ಯ ಹೆದ್ದಾರಿ ಗುಂಡಿ ಬಿದ್ದಿವೆ. ಅದಕ್ಕೆ ಟೆಂಡರ್ ಕರೆಯಲಿಲ್ಲ. ಅದಕ್ಕೆ ಏನಾದರೂ ಮುಕ್ತಿ ಮಾಡುತ್ತಾರಾ?

ಅಧ್ಯಕ್ಷರು : ಅವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಮುಂದಿನ ಪ್ರಶ್ನೆ ಕೇಳಿ. ಮಾನ್ಯ ಪ್ರಕಾಶ್ ಖಂಡ್ರೆಯವರೆ ಕೇಳಿ.

ಬೀದರ್ ಜಿಲ್ಲೆಯ ಕಾರಂಜಾ ಯೋಜನೆ

34 (357): ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯನ್ನು Fast track (AIBP) ಯೋಜನೆ ಅಡಿಯಲ್ಲಿ ತೆಗೆದುಕೊಂಡ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಬೇಕೆಂದು ನಿಗಧಿ ಪಡಿಸಲಾಗಿದೆ.

ಆ) ಕಾರಂಜಾ ಯೋಜನೆಯನ್ನು ಯಾವಾಗ ಮುಗಿಸಬೇಕೆಂದು ಯೋಜಿಸಲಾಗಿದೆ;

ಇ) ಕಾರಂಜಾ ಅಣೆಕಟ್ಟೆಯ ಕೆಳಗಡೆ 65 ಎಕರೆ ಭೂಮಿಯಲ್ಲಿ ಉದ್ಯಾನವನ ನಿರ್ಮಿಸಲು ಯೋಜಿಸಲಾಗಿದೆಯೇ;

ಈ) ಯೋಜಿಸಲಾದ ಉದ್ಯಾನವನ ಕೆಲಸ ಈಗ ಯಾವ ಹಂತದಲ್ಲಿದೆ ಮತ್ತು ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಉ) ಕಾರಂಜಾ ಯೋಜನೆಯ ಏತ ನೀರಾವರಿಯ ಮೇಲ್ಗಾಲುವೆ ನಿರ್ಮಿಸಲು ಯೋಜನೆ ಸರ್ಕಾರದ ಮುಂದಿದೆಯೆ;

ಊ) ಇದ್ದರೆ, ಈ ಯೋಜನೆ ಕಾಮಗಾರಿ ಯಾವಾಗ ಕೈಗೆತ್ತಿಕೊಂಡು ಪೂರ್ಣವಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು)

ಅ) ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯನ್ನು ಎ.ಐ.ಬಿ.ಪಿ (ಫಾಸ್ಟ್ ಟ್ರಾಕ್) ಸಹಾಯ ಧನದಡಿಯಲ್ಲಿ ಜೂನ್ 2004ಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿತ್ತು. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬವಾದ ಕಾರಣ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಭೂಮಾಲೀಕರಿಂದ ಅಡಚಣೆ ಉಂಟಾದ ಕಾರಣ ಯೋಜನೆಯ ಪ್ರಗತಿಯಲ್ಲಿ ವಿಳಂಬವಾಗಿರುತ್ತದೆ. ಯೋಜನೆಯನ್ನು ಮಾರ್ಚ್ 2005ರ ಅಂತ್ಯಕ್ಕೆ ಪೂರ್ಣಗೊಳಿಸಲು ಕ್ರಿಯಾ ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

ಆ) ಕಾರಂಜಾ ಯೋಜನೆಯನ್ನು ಮಾರ್ಚ್ 2005ರ ಅಂತ್ಯಕ್ಕೆ ಪೂರ್ಣಗೊಳಿಸಲು ಪರಿಷ್ಕೃತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ

ಇ) ಕಾರಾಂಜಾ ಅಣೆಕಟ್ಟಿನ ಕೆಳಗಡೆ ಸುಮಾರು 76 ಎಕರೆ ಭೂಪ್ರದೇಶದಲ್ಲಿ ಉದ್ಯಾನವನವನ್ನು ನಿರ್ಮಿಸಲು ಯೋಜಿಸಲಾಗಿದೆ.

ಈ) ಕಾರಂಜಾ ಯೋಜನೆಯ ಕೆಳಭಾಗದಲ್ಲಿನ ಉದ್ಯಾನವನವನ್ನು ನಿರ್ಮಿಸಲು ತಯಾರಿಸಿರುವ ವಿವರವಾದ ಅಂದಾಜು ಪಟ್ಟಿ ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.

ಉ) ಕಾರಂಜಾ ಯೋಜನೆ ಏತ ನೀರಾವರಿಯ ಒಟ್ಟು 22 ಕಿ.ಮೀ ಉದ್ದದ ನಾಲೆಯ ಪೈಕಿ 10 ಕಿ.ಮೀ ವರೆಗಿನ ಕಾಮಗಾರಿಗಳು ಪೂರ್ಣಗೊಂಡಿವೆ. ಉಳಿದ ನಾಲಾ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿದೆ. ಈ ಏತ ನೀರಾವರಿ ಕಾಲುವೆಯ ಮೇಲ್ಗಾಲುವೆ ನಿರ್ಮಿಸುವ ಪ್ರಸ್ತಾವನೆಯನ್ನು ತಯಾರಿಸುವ ಸಲುವಾಗಿ ಸರ್ವೇ ಮತ್ತು ತನಿಖಾ ಕಾರ್ಯಗಳು ಪ್ರಗತಿಯಲ್ಲಿದೆ.

ಊ) ಕಾರಂಜಾ ಯೋಜನೆಯನ್ನು ಎ.ಐ.ಬಿ.ಪಿ ಫಾಸ್ಟ್ ಟ್ರ್ಯಾಕ್ ಅಡಿಯಲ್ಲಿ ಕೈಗೊಂಡಿರುವುದರಿಂದ ಸದರಿ ಮೇಲ್ಗಾಲುವೆಯ ಕಾಮಗಾರಿಯನ್ನು ಮಾರ್ಚ್ 2005ಕ್ಕೆ ಪೂರ್ಣಗೊಳಿಸಲಾಗುವುದು.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೆ, ಈ ಉತ್ತರದಲ್ಲಿ ಕಾರಂಜಾ ಯೋಜನೆ 1973 ರಿಂದ ನಡೆಯುತ್ತಿದೆ ಇದಕ್ಕೆ ಈಗಾಗಲೇ 31 ವರ್ಷಗಳು ಆಗಿವೆ. ನಾನು ಶಾಸಕನಾಗಿ ಈ ಒಂದು ಯೋಜನೆಯ ಬಗ್ಗೆ ಪ್ರತಿ ಸಲ ಸದನದಲ್ಲಿ ಕೇಳಿದಾಗ, ಎರಡೂ ಸಾರಿ ಹಿಡಿದುಕೊಂಡೇ, ಈ ವರ್ಷದಲ್ಲಿ ಈ ಒಂದು ಯೋಜನೆಯನ್ನು ನಾವು ಪೂರ್ಣಗೊಳಿಸುತ್ತೇವೆಂದು ಉತ್ತರ ಕೊಟ್ಟು ಕೊಂಡೇ ಬಂದಿದ್ದಾರೆ. ಈಗಿನ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಹಿರಿಯ ಮಂತ್ರಿಗಳು

ಹಾಗೂ ಹಿರಿಯ ನಾಯಕರು, 2005ರಲ್ಲಿ ಮುಗಿಸುತ್ತೇನೆಂದು ಕೊಟ್ಟಿದ್ದಾರೆ. ಇದು ಫಾಸ್ಟ್ ಟ್ರ್ಯಾಕ್‌ನಲ್ಲಿ ಎ.ಐ.ಬಿ.ಪಿ. ಒಂದು ಕೇಂದ್ರದ ಯೋಜನೆಯಲ್ಲಿ ನೂರು ಕೋಟಿ ರೂಪಾಯಿ ಬಂದಿದೆ. ವಿಶೇಷವಾಗಿ ಏನಾದರೂ ಈ ಯೋಜನೆಯಲ್ಲಿ, ಬರೀ ಆಶ್ವಾಸನೆಯಾಗುತ್ತಿದೆಯೇ ಹೊರತು ಅದರ ಜೊತೆ ಜೊತೆಯಿಲ್ಲಿ ಫೀಲ್ಡ್ ಕೆನಾಲ್‌ಗಳಿಗೆ ಇವತ್ತಿನವರೆಗೆ ಇದರ ಅಂದಾಜು ವೆಚ್ಚ ಇದರಲ್ಲಿ ಬಂದಿಲ್ಲ. ಮಾನ್ಯ ಮಂತ್ರಿಗಳು ಈ ಒಂದು ಪ್ರಶ್ನೆಗೆ ಉತ್ತರ ಕೊಡಬೇಕೆಂದು ನಾನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ. ಏಕೆಂದರೆ, ಈ ಯೋಜನೆಯಲ್ಲಿ ಫೀಲ್ಡ್ ಕೆನಾಲ್‌ಗಳಿಗೆ ಯಾವುದೇ ಅಂದಾಜು ಮಾಡಿ ಇದಕ್ಕೆ ಹಣವನ್ನು ನಿಗದಿ ಪಡಿಸಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಸುಮಾರಿ ಅವರು ಹೇಳಿದಾಗೆ ಹೆಚ್ಚು ಕಡಿಮೆ 30 ವರ್ಷಗಳಿಂದ ಕೆಲಸ ನಡೆದಿದೆ. ಬೀದರ್, ಗುಲ್ಬರ್ಗಾ, ಬಳ್ಳಾರಿ, ಬೆಳಗಾಂ, ಬಿಜಾಪುರ, ಈ ಭಾಗದಲ್ಲಿ ಭೀಕರವಾದಂಥ ಬರಗಾಲ ಬಿದ್ದಾಗ ಇದನ್ನು ಚಾಲನೆಯಲ್ಲಿ ಬಂತು. ಶ್ರೀಮಾನ್ ದೇವರಾಜ್ ಅರಸ್ ಅವರ ಕಾಲದಲ್ಲಿ ಇದಕ್ಕೆ ಒಂದು ಅಂದಾಜು ಮಾಡಿದರು, ಆಗ ಆ ಅಂದಾಜು 9 ಕೋಟಿ 9 ಲಕ್ಷ ರೂ.ಗಳು ಇವತ್ತು ಅದರ ಅಂದಾಜು ವೆಚ್ಚ 416 ಕೋಟಿ ರೂ, 416 ಕೋಟಿ ರೂಪಾಯಿಗಳಲ್ಲಿ ಈಗಾಗಲೇ ಸರಕಾರ 314 ಕೋಟಿ ರೂಪಾಯಿ ಖರ್ಚು ಮಾಡಿದೆ. ಏನೂ ಆಗಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ, 314 ಕೋಟಿ ರೂಪಾಯಿ ಖರ್ಚಾಗಿದೆ. ಕೇಂದ್ರ ಸರ್ಕಾರದ Accelerated Irrigation Benefit programme - ಅಡಿಯಲ್ಲಿ ಹೋದ ವರ್ಷ 25 ಕೋಟಿ ರೂ. ಇಟ್ಟಿದ್ದು, ಈ ವರ್ಷವೂ ಕೂಡ ನಾವು 25 ಕೋಟಿ ರೂಪಾಯಿ ಇಟ್ಟಿದ್ದೇವೆ. ಹೀಗೆ ಇದನ್ನು ಪೂರ್ತಿಯಾಗಿ 2005 ಎಂಡ್‌ವರೆಗೆ ನಾವು ಇದನ್ನು ಕಂಪ್ಲೀಟ್ ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಮತ್ತು ಈಗಾಗಲೇ ಸುಮಾರು 20,360 ಹೆಕ್ಟೇರ್ ಭೂಮಿಯಲ್ಲಿ ನೀರಾವರಿ ಇದೆ. ಇದಕ್ಕೆ ಇನ್ನು ಡೆವಲಪ್ ಮಾಡತಕ್ಕಂಥದ್ದು 15,300 ಹೆಕ್ಟೇರ್ ಮಾತ್ರ ಡೆವಲಪ್ ಮಾಡಬಹುದು. ಉಳಿದಿರುವುದನ್ನು ನಿಮಗೆ ಸ್ವಲ್ಪ ಹೆಚ್ಚು ಕಡಿಮೆ more than 50 ಪರ್ಸೆಂಟ್ ಆಗಿದೆ. ಅದನ್ನು ಡೆವಲಪ್ ಮಾಡಬೇಕಾದರೆ ಈ ನೂರು ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕಾಗುತ್ತದೆ. ಈ ವರ್ಷ ಈಗಾಗಲೇ 25 ಕೋಟಿ ರೂಪಾಯಿ ಇಟ್ಟಿದ್ದೇವೆ. ಮುಂದೆ ಇದನ್ನು ಡಿಸೆಂಬರ್ 2005 ಅಂತ್ಯದೊಳಗೆ ಸಂಪೂರ್ಣ ಕೆಲಸ ಮುಗಿಯುತ್ತದೆ, ಬಹುಶಃ ಅವಾಗ ಯಾವ ಸಮಸ್ಯೆಯು ಇರುವುದಿಲ್ಲ. ಮಧ್ಯದಲ್ಲಿ ಸ್ವಲ್ಪ ಲಿಫ್ಟ್ ಇರಿಗೇಷನ್ ಬಂದಿದೆ. ರೀಹ್ಯಾಬ್ಲಿಟೇಷನ್‌ದು ಬಂದಿದೆ. ಲ್ಯಾಂಡ್ ಅಕ್ವಿಜೇಷನ್‌ದ್ದು ಆ್ಯಡ್ ಆಗಿದೆ. ಹೀಗೆ ಒಂದೊಂದೇ ಆ್ಯಡ್ ಮಾಡಿಕೊಂಡು 9 ಕೋಟಿ ರೂ ಇದ್ದದ್ದು ಇವತ್ತು 416 ಕೋಟಿ ರೂ ಆಗಿದೆ. ಅದಕ್ಕಾಗಿ ಇದು ನಾವು ಸಮಯದ ಪ್ರಕಾರ ಮಾಡದೇ ಇದ್ದಾಗ ಅನೇಕ ಸಾರಿ ಈ ರೀತಿ ಆಗುತ್ತದೆ. ಮತ್ತೆ ಅಂದಾಜು ಜಾಸ್ತಿ ದುಡ್ಡು ಇಡುವುದು ಕಡಿಮೆ ಎಂದರೆ ಹತ್ತಾರು ವರ್ಷ ಹೀಗೆ ನಡೆಯುತ್ತದೆ. ಅದಕ್ಕೆ Allelerated Irrigation Benefit Programme ಇರುವುದರಿಂದ ಇದು ಸಂಪೂರ್ಣವಾಗಿ ಫಾಸ್ಟ್ ಟ್ರ್ಯಾಕ್‌ನಲ್ಲಿ ಕಂಪ್ಲೀಟ್ ಆಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸದನಕ್ಕೆ ಹೇಳುವುದಕ್ಕೆ ಇಚ್ಛಿಸುತ್ತೇನೆ.

ಶ್ರೀ ಪ್ರಕಾಶ್ ಖಂಡ್ರೆ : ಈ ಯೋಜನೆಯಲ್ಲಿ ಫಾಸ್ಟ್ ಟ್ರ್ಯಾಕ್‌ನಲ್ಲಿ ನೂರು ಕೋಟಿ ರೂಪಾಯಿ ಏನು ಕೇಂದ್ರ ಸರ್ಕಾರ ಕೊಟ್ಟಿರುವುದರಲ್ಲಿ ಫೀಲ್ಡ್ ಕೆನಾಲ್‌ಗಳಿಗೆ ಅಂದಾಜು ಇದರಲ್ಲಿ ಇನ್‌ಕ್ಲೂಡ್ ಆಗಿದೆಯೋ ಏನೋ ಎಂದು ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರಲ್ಲಿ ಬಹುಶಃ ಅದನ್ನು ನಾನು ವೆರಿಫೈ ಮಾಡಿಸುತ್ತೇನೆ. ನನ್ನಲ್ಲಿ ಇರತಕ್ಕಂಥ ವಿತರಣಾ ಕಾಲುವೆಗೆ ಸುಮಾರು ಕಿಲೋಮೀಟರ್ 0 ದಿಂದ 90 ರವರೆಗೆ ಎಲ್ಲಾ ವಿತರಣಾ ಕಾಲುವೆಗಳು ಪೂರ್ಣಗೊಂಡಿವೆ. ಎನ್ನತಕ್ಕಂಥ ಮಾಹಿತಿ ಇದೆ. ಆದರೆ ತಾವು ಅಂದರೆ ಡಿಸ್ಟಿಬ್ಯೂಟರೀಸ್ ಬಗ್ಗೆ ಬಹುಶಃ ತಾವು ಕೇಳತಕ್ಕಂಥದ್ದನ್ನು ನಾನು ಮಾಹಿತಿ ತರಿಸಿಕೊಂಡು ಅವರಿಗೆ ಒದಗಿಸಿ ಕೊಡುತ್ತೇನೆ.

ಶ್ರೀ ಪ್ರಕಾಶ್ ಖಂಡ್ರೆ : ನಾನು ಈಗ ತಮಗೆ ಮಾಹಿತಿ ಕೊಡುತ್ತೇನೆ ಫೀಲ್ಡ್ ಕೆನಾಲ್ ಇದರಲ್ಲಿ ಇಲ್ಲ, ಇದರ ಬಗ್ಗೆ ಬಹಳಷ್ಟು ಮೀಟಿಂಗ್‌ನಲ್ಲಿ ಡಿಸ್‌ಕಸ್ ಆಗಿದೆ. ಕೇಂದ್ರ ಸರ್ಕಾರ ಇದು ಫೀಲ್ಡ್ ಕೆನಾಲ್‌ಗೆ ಕೊಡುತ್ತಿಲ್ಲ. ಇದೊಂದು ಏನು ಇದೆ ಈ ಮೇನ್ ಕೆನಾಲ್‌ಗೆ, ಡಿಸ್ಟಿಬ್ಯೂಟರ್ಸ್ ಸಲುವಾಗಿ ಇದರಲ್ಲಿ ಇದೆ. ಹೀಗಾಗಿ ತಾವು ದಯಮಾಡಿ ಫೀಲ್ಡ್ ಕೆನಾಲ್‌ಗೆ ರಾಜ್ಯ ಸರ್ಕಾರದ ಹಣ ಇಡಬೇಕು ಇಲ್ಲ ಅಂದರೆ ಬೇರೆ ಏನು ವ್ಯವಸ್ಥೆ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದನ್ನು ನಾನು ಮಾಹಿತಿ ತರಿಸಿ ಕೊಡುತ್ತೇನೆ. ಏಕೆಂದರೆ, ನನಗೆ ಮಾಹಿತಿ ಸಂಪೂರ್ಣವಾಗಿ ಬಂದಿಲ್ಲ. ಖಂಡಿತವಾಗಿ ನಾನು ಮಾಹಿತಿ ತರಿಸಿ ನಾನು ಅವರಿಗೆ ಒದಗಿಸಿ ಕೊಡುತ್ತೇನೆ.

ಅಧ್ಯಕ್ಷರು : ಶ್ರೀಮತಿ ಸುನೀತಾ ವೀರಪ್ಪ ಗೌಡರವರ ಪ್ರಶ್ನೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾವಣೆಯಾಗಿರುತ್ತದೆ. ಮುಂದಿನ ಪ್ರಶ್ನೆ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ತಮ್ಮ ಪ್ರಶ್ನೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ತಮಗೆ ನಾನು ಕೈ ಮುಗಿದು ಪ್ರಾರ್ಥನೆ ಮಾಡುವುದು ಏನೆಂದರೆ, ತಾವು ದಯವಿಟ್ಟು ಆ ಪ್ರಶ್ನೆ ತರಿಸಿ ನೋಡಿ, ಪಿಡಬ್ಲ್ಯೂಡಿ ನಲ್ಲಿ ಗ್ರಾಮೀಣ ರಸ್ತೆಗಳು ಬರುವುದಿಲ್ಲವೆ? ಆ ಊರಿನ ಹೆಸರುಗಳ ಪಟ್ಟಿಯನ್ನು ಶ್ರೀಮತಿ ಸುನೀತಾ ವೀರಪ್ಪ ಗೌಡರವರು ನಿಮಗೆ ಕೊಡುತ್ತಾರೆ. ಯಾವನೋ ಅವನು ನಿಮ್ಮ ಅಧಿಕಾರಿ ಉತ್ತರ ಕೊಡುತ್ತಾನೆ ಅದನ್ನು ಮಂತ್ರಿಗಳು ನೋಡಿಕೊಳ್ಳದಿದ್ದರೆ, ಹೇಗೆ? ಈಗ ಪಿಡಬ್ಲ್ಯೂಡಿಗೆ ಗ್ರಾಮೀಣ ರಸ್ತೆಗಳು ಎಂದರೆ ಸ್ಪೆಸಿಫಿಕ್ ಆಗಿ ಪಿಡಬ್ಲ್ಯೂಡಿ ಗೆ ಸಂಬಂಧಪಟ್ಟ ರಸ್ತೆಗಳ ಬಗ್ಗೆ ಏನೆಂದು ಕೇಳಿದ್ದಾರೆ. ಅವರು ಹೀಗೆ ಉತ್ತರ ಕೊಟ್ಟರೆ ಹೇಗೆ? ಸಾರ್ ಈ ಅಧಿಕಾರಿಗಳಿಗೆ ಜವಾಬ್ದಾರಿ ಇದೆಯೇ?ನಾನು ನಮ್ಮ ಸಚಿವರ ಬಗ್ಗೆ ಆಕ್ಷೇಪಣೆ ಮಾಡುತ್ತಿಲ್ಲ. ಕಣ್ಣು ಮುಚ್ಚಿಕೊಂಡು ಬೇಜವಾಬ್ದಾರಿಯಿಂದ ಉತ್ತರ ಕೊಡಬಹುದೇನು? ಅಪರೂಪಕ್ಕೊಂದು ಪ್ರಶ್ನೆ ಬರುತ್ತದೆ. ಒಬ್ಬ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಏನು ಇದು ಇಲ್ಲಿ ಏನು ನಡೆಯುತ್ತದೆ ಅಧಿಕಾರಿಗಳನ್ನು ಹೇಳುವವರು ಕೇಳುವವರು ಇಲ್ಲವೆ? ನಾನು ಪಟ್ಟಿ ಕಳುಹಿಸಿ ಕೊಡುತ್ತೇನೆ. ಅಧಿಕಾರಿಗಳು ಕ್ಷಮಾಪಣೆ ಕೇಳಬೇಕಾಗುತ್ತದೆ. ಮಂತ್ರಿಗಳಿಂದ ನಾನು ಏನೂ ಅಪೇಕ್ಷೆ ಪಡುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) : ಸಾರ್, ಅದು ನನಗೆ ಬರುವುದಿಲ್ಲ. ಅದು ಜೆಡ್‌ಪಿ ಗೆ ಬರುತ್ತದೆ. ಗ್ರಾಮೀಣ ರಸ್ತೆಗಳು ಜೆಡ್‌ಪಿಗೆ ಬರುತ್ತದೆ.